ಈ) ನಿಗದಿತ ಅವಧಿಯಲ್ಲಿ ಬಿಪಿಎಲ್ ಪಡಿತರ ಚೀಟಿಗೆ ಅರ್ಜಿ ನೀಡಲಾಗದವರಿಗೆ ಪುನಃ ಯಾವಾಗ ಅವಕಾಶ ನೀಡಲಾಗುವುದು?

ಈಗ ಬಂದಿರುವ ಅರ್ಜಿಗಳ ಪರಿಶೀಲನೆ ಮುಗಿದ ನಂತರ ತೀರ್ಮಾನಿಸಲಾಗುವುದು.

ಆನಾಸ 46 ಡಿಆರ್‌ಎ 2009

(ಹೆಚ್.ಹಾಲಪ್ಪ)
ಆಹಾರ ಮತ್ತು ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಕರ್ನಾಟಕ ವಿಧಾನ ಸಭೆ

407 ಶ್ರೀ ಕೆ.ಪಿ.ಬಚ್ಚೇಗೌಡ (ಚಿಕ್ಕಬಳ್ಳಾಪುರ)

27.02.2009

ಅ) ರಾಜ್ಯದಲ್ಲಿ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು?(ಹೆಸರು ಮತ್ತು ವಿಳಾಸ ನೀಡುವುದು)

ರಾಜ್ಯದಲ್ಲಿ ದಿನಾಂಕ 31.03.2008ರ ಅಂತ್ಯಕ್ಕೆ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳು 116 ಇರುತ್ತವೆ.

ಆ) ಆ ಪೈಕಿ ನಿಷ್ಕ್ರಿಯ ಸಹಕಾರ ಸಂಘಗಳೆಷ್ಟು ಹಾಗೂ ಕ್ರಿಯಾಶೀಲ ಸಹಕಾರ ಸಂಘಗಳೆಷ್ಟು? ಈ ಸಂಘಗಳು ನಿಷ್ಕ್ರಿಯಗೊಳ್ಳಲು ಕಾರಣಗಳೇನು (ವಿವರ ನೀಡುವುದು)

ಇವುಗಳಲ್ಲಿ ನಿಷ್ಕ್ರಿಯ ಸಹಕಾರ ಸಂಘಗಳು 03 ಇದ್ದು, ಕ್ರಿಯಾಶೀಲ ಸಹಕಾರ ಸಂಘಗಳು 108 ಇರುತ್ತವೆ.

ಸಂಘಗಳು ನಿಷ್ಕ್ರಯಗೊಳ್ಳಲು ಹಲವಾರು ಕಾರಣಗಳಿದ್ದು, ಅವುಗಳಲ್ಲಿ ಮುಖ್ಯವಾದವುಗಳು;

1. ಬೆಳೆಗೆ ಉತ್ತಮ ಬೆಲೆ ದೊರೆಯದ ಕಾರಣ ಸಾಲ ವಸೂಲಾತಿ ಕುಂಠಿತವಾಗಿರುತ್ತದೆ.
2. ಸಂಘಗಳಲ್ಲಿ ಕಾಲಕಾಲಕ್ಕೆ ನಡೆದಿರುವ ಹಣದುರುಪಯೋಗ ಪ್ರಕರಣಗಳು ಹೆಚ್ಚುತ್ತಿರುವುದರಿಂದ
3. ಸಂಘಗಳ ವ್ಯವಹಾರದ ನಿರ್ವಹಣೆ ಸರಿಯಿಲ್ಲದ ಕಾರಣ

ಇ) ಕಳೆದ 3 ವರ್ಷಗಳಿಂದ ವರ್ಷವಾರು ಅಡಿಟ್ ಮಾಡಲಾಗಿರುವ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು (ವಿವರ ನೀಡುವುದು) ಇದೇ ಅವಧಿಯಲ್ಲಿ ರಾಜ್ಯ ಮಟ್ಟದ ಕಾರ್ಯ ವ್ಯಾಪ್ತಿಯಲ್ಲಿ, ಪುನರ್ ಆಡಿಟ್ ಮಾಡಲಾಗಿರುವ ಸಂಘಗಳೆಷ್ಟು (ವಿವರ ನೀಡುವುದು)

ಕಳೆದ 3 ವರ್ಷಗಳ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ವಿವರ ಕೆಳಕಂಡಂತಿರುತ್ತದೆ.

1-4-2005 ರಿಂದ 31-3-2006

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾಪನಾ	
ಲೆಕ್ಕಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	36	–	05	41
ಲೆಕ್ಕಪರಿಶೋಧನೆ ಆದ ಸಹಕಾರ ಸಂಘಗಳ ಸಂಖ್ಯೆ	24	–	01	25
ಉಳಿಕೆ	12	–	04	16

1-4-2006 ರಿಂದ 31-3-2007

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾಪನಾ	
ಲೆಕ್ಕಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	36	–	05	41
ಲೆಕ್ಕಪರಿಶೋಧನೆ ಆದ ಸಹಕಾರ ಸಂಘಗಳ ಸಂಖ್ಯೆ	27	–	01	28
ಉಳಿಕೆ	09	–	04	13

1-4-2007 ರಿಂದ 31-3-2008

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾಪನಾ	
ಲೆಕ್ಕಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	40	–	04	44
ಲೆಕ್ಕಪರಿಶೋಧನೆ ಆದ ಸಹಕಾರ	29	–	01	30

ಸಂಘಗಳ ಸಂಖ್ಯೆ				
ಉಳಿಕೆ	11	–	03	14

ಲೆಕ್ಕಪರಿಶೋಧನೆಯಾಗಿರುವ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಪುನರ್ ಆಡಿಟ್ ನಡೆದಿರುವುದಿಲ್ಲ.

ಈ) ಪುನರ್ ಆಡಿಟ್ ಮಾಡಿದ ರಾಜ್ಯ ಮಟ್ಟದ ಕಾರ್ಯ ವ್ಯಾಪ್ತಿಯ ಸಹಕಾರ ಸಂಘಗಳಲ್ಲಿ ಯಾವ ಲೋಪ ದೋಷಗಳನ್ನುಕಂಡು ಹಿಡಿಯಲಾಗಿದೆ. ಹಾಗೂ ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಪುನರ್ ಆಡಿಟ್ ನಡೆಯದೇ ಇರುವುದರಿಂದ ಅನ್ವಯಿಸುವುದಿಲ್ಲ

ಉ) ಕಳೆದ 3 ವರ್ಷಗಳಿಂದ ವರ್ಷಾವಾರು ಅಡಿಟ್ ಮಾಡಿದ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಪೈಕಿ ಪುನರ್ ಆಡಿಟ್ ಮಾಡಲಾದ ಸಹಕಾರ ಸಂಘಗಳಲ್ಲಿ ಮೂಲ ಆಡಿಟ್‌ನಲ್ಲಿಲ್ಲದ ಲೋಪದೋಷಗಳು ಕಂಡು ಬಂದಿದ್ದರೆ ಆಡಿಟ್ ಮಾಡಿದ ಅಧಿಕಾರಿಗಳ ಹಾಗೂ ಮೇಲ್ವಿಚಾರಣೆ ಮಾಡಿದ ಅಧಿಕಾರಿಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಪುನರ್ ಆಡಿಟ್ ನಡೆಯದೇ ಇರುವುದರಿಂದ ಅನ್ವಯಿಸುವುದಿಲ್ಲ

ಸಂಖ್ಯೆ: ಸಿಓ 40 ಸಿಎಲ್‌ಎಂ 2009

ಸಹಿ/-
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು.

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

<u>ಕರ್ನಾಟಕ ವಿಧಾನ ಸಭೆ</u>

408 ಶ್ರೀ ಬಚ್ಚೇಗೌಡ ಕೆ.ಪಿ
ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

ಅ) ಘಟಪ್ರಭ ಸಹಕಾರ ಸಕ್ಕರೆ ಕಾರ್ಖಾನೆಯು ಸಕ್ಕರೆ ದಾಸ್ತಾನಿನ ಮೇಲೆ "ಕೀ ಲೋನ್" ಮತ್ತು ಇತರೆ ಸಾಲಗಳನ್ನು ಪಡೆದು ಕೊಂಡಿರುವ ಸಹಕಾರಿ ಬ್ಯಾಂಕುಗಳಾವುವು ಹಾಗೂ ಈ ಸಾಲಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡು ಮರು ಪಾವತಿ ಮಾಡಲಾಗಿದೆಯೇ;

ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯು ಸಕ್ಕರೆ ದಾಸ್ತಾನಿನ ಆಧಾರದ ಮೇಲೆ ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಿಂದ ಸಾಲ ಪಡೆದುಕೊಂಡಿರುತ್ತದೆ. ಈ ಸಾಲವನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡಿದ್ದು,